ಶ್ರೀ ಯು.ಬಿ. ಬಣಕಾರ್:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಕೊಠಡಿಗಳು ಬೇಕೆಂದು ನಮ್ಮ ಬೇಡಿಕೆಯಿರುವುದು. ಆದರೆ ನೀವು ಎರಡೆಂದು ಹೇಳಿದಿರಿ. ಆದಷ್ಟು ಬೇಗನೆ ಇನ್ನೂ ಹೆಚ್ಚಾಗಿ ಮಂಜೂರು ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ವಿನಯ್‌ಕುಮಾರ್ ಸೊರಕೆ:– ಮಾನ್ಯ ಸಚಿವರಿಗೆ ತಿಳಿಸುತ್ತೇವೆ.

ಅಧ್ಯಕ್ಷರು:– ಹೆಚ್.ಡಿ. ರೇವಣ್ಣ ನವರು, ನೋಡಿ ನೀವು ಎರಡೆರೆಡು ಸಾರಿ ಕೊಡುತ್ತಿದ್ದೀರಿ. ಇದು ತಪ್ಪಲ್ಲವೇ?

ಶ್ರೀ ಕೆ. ತಿಮ್ಮರಾಯಪ್ಪ:– ಮಾನ್ಯ ಅಧ್ಯಕ್ಷರೆ, ನನ್ನದು ನಂ. 3 ನೇದು ಹೇಳಿರುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಅದು ನನ್ನದಲ್ಲ.

ಅಧ್ಯಕ್ಷರು:– ಇನ್ನೊಂದು ಸಾರಿ ನಾನೇ ಸ್ಕೂಟಿನಿ ಮಾಡಬೇಕಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು:– ಒಬ್ಬೊಬ್ಬರು ಒಂದು ತಂದರೆ ಸಾಕು. ಆದರೆ ನೀವು ಎರಡೆರಡನ್ನು ಹಾಕಿದರೆ ಹೇಗೆ?

ಶ್ರೀ ಹೆಚ್.ಡಿ. ರೇವಣ್ಣ:– ಸಾರ್, ಅದನ್ನು ಕೆ.ಎಂ. ಶಿವಲಿಂಗೇಗೌಡರು, ಚೆನ್ನರಾಯಪಟ್ಟಣದವರು ಹಾಕಿರುವುದು.

11) ವಿಷಯ : ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿರುವ ವಾಣಿಜ್ಯ ಮಳಿಗೆಗಳ ಬಾಡಿಗೆಯನ್ನು ಪರಿಷ್ಕರಿಸುವ ಬಗ್ಗೆ.

*****

ಶ್ರೀ ಹೆಚ್.ಡಿ. ರೇವಣ್ಣ:– ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿರುವ ವಾಣಿಜ್ಯ ಮಳಿಗೆಗಳ ಬಾಡಿಗೆಯನ್ನು ಪರಿಷ್ಕರಿಸುವ ಬಗ್ಗೆ ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ವಿನಯ್‌ಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು) (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರ ಪರವಾಗಿ):– ಸರ್ಕಾರದ ಸುತ್ತೋಲೆ: ನಅಇ 221 ಜಿಇಎಲ್ 2009, ದಿನಾಂಕ: 26.10.2009 ರಲ್ಲಿ ವಾಣಿಜ್ಯ ಮಳಿಗೆಳಿಗೆ ಸಂಬಂಧಿಸಿದಂತೆ ವಿಲೇವಾರಿ ನೀತಿಯನ್ನು ನಿಗದಿಪಡಿಸಿದ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ತಿಳಿಸಲಾಗಿದೆ. ಈ ಮಳಿಗೆಗಳ ವಿಲೇವಾರಿ ನೀತಿಯಲ್ಲೀ 1, 2, 3 ಮತ್ತು 4 ಸಂದರ್ಭಗಳಲ್ಲಿ ಸರ್ಕಾರದ ಘಟನೋತ್ತರ ಅನುಮೋದನೆಯನ್ನು ಪಡೆಯಲು ನಿರ್ದೇಶಿಸಲಾಗಿತ್ತು. ಹೀಗೆ ಘಟನೋತ್ತರ ಅನುಮೋದನೆ ಪಡೆಯುವಾಗ ವಿಳಂಬದಿಂದ ಸ್ಥಳೀಯ ಸಂಸ್ಥೆಗಳ ಆದಾಯಕ್ಕೆ ಧಕ್ಕೆ ಉಂಟಾಗಬಾರದೆಂಬ ಉದ್ದೇಶದಿಂದ ಈ 4 ಸಂದರ್ಭಗಳಲ್ಲಿ ಜಿಲ್ಲಾ ಮಟ್ಟದಲ್ಲಿಯೇ ಜಿಲ್ಲಾಧಿಕಾರಿಗಳು ನಿರ್ಣಯ ಕೈಗೊಳ್ಳಲು ನಿರ್ಧರಿಸಲಾಗಿತ್ತು. ಅವುಗಳಲ್ಲಿ ಈ ಪ್ರಕಾರವಾಗಿರುತ್ತವೆ.

1. ನಗರ ಸ್ಥಳೀಯ ಸಂಸ್ಥೆಯ ಖಾಲಿ ಜಾಗದಲ್ಲಿ ನೂತನವಾಗಿ ವಾಣಿಜ್ಯ ಸಂಕೀರ್ಣ ನಿರ್ಮಾಣ ಮಾಡಿ ವಿಲೇವಾರಿ ಮಾಡುವ ಸಂದರ್ಭಗಳಲ್ಲಿ
2. ಅತಿಕ್ರಮಿಸಿದ/ಒತ್ತುವರಿ ಜಾಗದಲ್ಲಿ ನೂತನವಾಗಿ ವಾಣಿಜ್ಯ ಸಂಕೀರ್ಣವನ್ನು ಸ್ಥಳೀಯ ಸಂಸ್ಥೆಯು ನಿರ್ಮಿಸಿ, ನಿರ್ಮಾಣ ಪೂರ್ಣಗೊಂಡ ನಂತರ ಅತಿಕ್ರಮಣದಾರರಿಗೆ ಪುನರ್ ವಸತಿ ಕಲ್ಪಿಸಲು ಕರಾರುಬದ್ಧರಾಗಿದ್ದಲ್ಲಿ, ಸದರಿ ಕರಾರುದಾರರಿಗೆ ಮುಂದೆ ವಿಲೇ ಮಾಡುವ ಸಂದರ್ಭಗಳಲ್ಲಿ

3. ಹಾಲಿಯಿರುವ ಹಳೆಯ ವಾಣಿಜ್ಯ ಸಂಕೀರ್ಣದಲ್ಲಿ ಬಾಡಿಗೆದಾರರು ವಾಸ್ತವ್ಯವಿದ್ದು ಕರಾರು ಪತ್ರದನ್ವಯ ಅವರ ಬಾಡಿಗೆ ಅವಧಿ ಮುಕ್ತಾಯಗೊಂಡಿದ್ದಲ್ಲಿ, ಗುತ್ತಿಗೆ ಅವಧಿಯನ್ನು ಹೊಸ ದರಗಳಲ್ಲಿ ಮುಂದುವರಿಸುವ ಮೂಲಕ ವಿಲೇವಾರಿ
4. ಹಳೆಯ ಮತ್ತು ಶಿಥಿಲಗೊಂಡಿರುವ ಮಾರುಕಟ್ಟೆ ಕಟ್ಟಡಗಳಲ್ಲಿನ ಅಂಗಡಿಗಳ ಬಾಡಿಗೆದಾರರಿಗೆ ಗುತ್ತಿಗೆ ಅವಧಿಯು ಚಾಲ್ತಿಯಲ್ಲಿದ್ದು, ಆ ಕಟ್ಟಡವನ್ನು ಕೆಡವಿ ಹೊಸದಾಗಿ ನಿರ್ಮಿಸಿದ ಕಟ್ಟಡದಲ್ಲಿ ಲೀಸ್ ಗುತ್ತಿಗೆಯನ್ನು ನೀಡಬೇಕೆಂದು ಒಪ್ಪಂದವಿರುವ ಸಂದರ್ಭಗಳಲ್ಲಿ

ಮೇಲಿನ ಸಂದರ್ಭಗಳ ಬಗ್ಗೆ ಸಂದರ್ಭ–3 ರ ಬಗ್ಗೆ ಈ ಹಿಂದೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 64172/2010 ಹಾಗೂ ರಿಟ್ ಅರ್ಜಿ ಸಂಖ್ಯೆ: 51621–623/2014 ಪ್ರಕರಣಗಳು ದಾಖಲಾಗಿದ್ದು, ಸದರಿ ರಿಟ್ ಅರ್ಜಿಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಸಂದರ್ಭ–3 ರ ಪ್ರಕರಣವು ಕರ್ನಾಟಕ ಪುರಸಭೆಗಳ ಕಾಯ್ದೆ 1964 ರ ಕಲಂ 72 ಹಾಗೂ Karnataka Municipalities (Guidance of Officers, Grant of Copies and Misc. provisions) Rules 1966 ರ ನಿಯಮ 39 ಕ್ಕೆ ವ್ಯತಿರಿಕ್ತವಾಗಿದೆಯೆಂದು ತಿಳಿಸಿ ಮೇಲೆ ತಿಳಿಸಿರುವ 4 ಸಂದರ್ಭಗಳ ಪೈಕಿ ಸಂದರ್ಭ–3 ನ್ನು ಮಾನ್ಯ ನ್ಯಾಯಾಲಯವು ರದ್ದುಪಡಿಸಿ ಸದರಿ ಸಂದರ್ಭವನ್ನು ಮೇಲಿನ ನಿಯಮಗಳಂತೆ ಸೂಕ್ತವಾಗಿ ಮಾರ್ಪಡಿಸುವಂತೆ ನಿರ್ದೇಶನವಿರುತ್ತದೆ.

ಮೇಲಿನ ಕಂಡಿಕೆಯಲ್ಲಿ ತಿಳಿಸಿರುವ ಮಾನ್ಯ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಪ್ರಸ್ತುತ ಸಂದರ್ಭ–3 ರಲ್ಲಿ ಅವಕಾಶವಿರುವಂತೆ 12 ವರ್ಷಗಳ ಲೀಸ್ ಅವಧಿ ಮುಗಿದ ನಂತರ ಸದರಿ ಲೀಸ್‌ದಾರರನ್ನು ಪರಿಷ್ಕೃತ ದರಕ್ಕೆ ಮುಂದುವರಿಸಲು ನಿಯಮಾನುಸಾರ ಆಗುವುದಿಲ್ಲ. ಆದ್ದರಿಂದ, ಲೀಸ್ ಅವಧಿ ಮುಗಿದ ನಂತರ ಮೇಲೆ ತಿಳಿಸಿರುವ ಕಲಂ 72 ಹಾಗೂ ನಿಯಮ 39 ರನ್ವಯ ಪುನಃ ಸದರಿ ವಾಣಿಜ್ಯ ಮಳಿಗೆಗಳನ್ನು ಹರಾಜು ಮೂಲಕ ವಿಲೇವಾರಿ ಮಾಡುವುದು ಅವಶ್ಯಕತೆಯಿರುತ್ತದೆ.

ಅದರಂತೆ ಸಂದರ್ಭ–3 ನ್ನು ಮಾರ್ಪಾಡು ಮಾಡುವ ಬಗ್ಗೆ ಸೂಕ್ತ ಆದೇಶ ನೀಡಿರುತ್ತೇನೆ.

ಸಂದರ್ಭ–3 ರ ಮಾರ್ಪಾಡು ಆದೇಶದ ನಂತರ, ಹೊಸ ನೀತಿಯ ಪ್ರಕಾರ ಹೊಳೆನರಸೀಪುರ ಪುರಸಭೆ ವ್ಯಾಪ್ತಿಯಲ್ಲಿನ ಹೊಳೆನರಸೀಪುರ ಪಟ್ಟಣದ ವಾಣಿಜ್ಯ ಮಳಿಗೆಗಳನ್ನು ವಿಲೇವಾರಿ ಮಾಡಲು ಕ್ರಮವಹಿಸಲಾಗುವುದು.

ಮುಂದುವರೆದು, ಪ್ರಸ್ತುತ ಇರುವ ವಾಣಿಜ್ಯ ಮಳಿಗೆಗಳ ಬಾಡಿಗೆ ದರವನ್ನು ಪರಿಷ್ಕರಿಸುವ ಬಗ್ಗೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಬಗ್ಗೆ ಲೋಕೋಪಯೋಗಿ ಇಲಾಖೆಯ ಅಭಿಪ್ರಾಯ ಪಡೆದು ಸೂಕ್ತ ದರವನ್ನು ನಿಗದಿಪಡಿಸಲಾಗುವುದು.

ಅಧ್ಯಕ್ಷರು:– ವಾಣಿಜ್ಯ ಮಳಿಗೆಗಳ ಬಾಡಿಗೆಯನ್ನು ಪರಿಷ್ಕರಿಸುವ ಬಗ್ಗೆ ಮಾನ್ಯ ಪೌರಾಡಳಿತ, ಸಚಿವರು.

ಶ್ರೀ ಹೆಚ್.ಡಿ. ರೇವಣ್ಣ:– ಸಾರ್, ಅದನ್ನು ಚೆನ್ನರಾಯಪಟ್ಟಣದ ಬಾಲು ಅವರು ಹಾಕಿರುವುದು, ನಾನು ಕೈಮುಗಿದು ಹೇಳುತ್ತೇನೆ.

ಅಧ್ಯಕ್ಷರು:– ರೀ ಸ್ವಾಮಿ, ನಾನು ಹೇಳುವುದನ್ನು ಕೇಳಿ. ಪರಿಷ್ಕರಣಾ ಮಾಡುವಂತಹ ತೀರ್ಮಾನ ಮಾಡಿ, ಟೆಂಡರ್ ಕರೆದು ಮಾಡಿದ್ದಾರಾ?

ಶ್ರೀ ಹೆಚ್.ಡಿ. ರೇವಣ್ಣ:– ಸಾರ್, ಕಟ್ಟಡ ಕಟ್ಟಿ ನಾಲ್ಕು ವರ್ಷಗಳ ಕಾಲವಾಗಿದೆ. ಹರಾಜು ಹಾಕುವುದಕ್ಕೆ ಪುರಸಭೆಯಿಂದ ಇನ್ನೂ permission ಕೊಟ್ಟಿಲ್ಲ.

ಅಧ್ಯಕ್ಷರು:– ಪರ್ಮಿಷನ್ ಕೊಡಬೇಕೆಂದು ಯಾರು ಹೇಳಿದರು? ಏನಾಯಿತು ಎಂದು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ:– ಕಟ್ಟಡ ಕಟ್ಟಿ ನಾಲ್ಕು ವರ್ಷಗಳ ಕಾಲ ಆಗಿದೆ. ಮುನಿಸಿಪಾಲಿಟಿಗೆ ಆದಾಯ ಹೇಗೆ ಬರುತ್ತದೆ?

ಅಧ್ಯಕ್ಷರು:– ರೀ ಸ್ವಾಮಿ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಪುರಸಭೆಗೆ ಸೇರಿರತಕ್ಕಂತಹ ಆಸ್ತಿಯನ್ನು ಪರಿಷ್ಕರಣ ಮಾಡಬೇಕೆಂದು ನಿರ್ಣಯ ಮಾಡಬೇಕು. ನಿರ್ಣಯ ಮಾಡಿದ ನಂತರ ಅಪ್ರೂವಲ್‌ಗೆ ಡಿ.ಸಿ. ಗೆ ಕಳುಹಿಸಬೇಕು.

ಶ್ರೀ ಹೆಚ್.ಡಿ. ರೇವಣ್ಣ:– ಡಿ.ಸಿ. ಗೆ ಕೊಟ್ಟು ನಾಲ್ಕು ವರ್ಷಗಳಾದರೂ ಕೊಟ್ಟಿರುವುದಿಲ್ಲ.

ಅಧ್ಯಕ್ಷರು:– ಯಾವ ಡಿ.ಸಿ. ಗೆ ಕಳುಹಿಸಿದ್ದೀರಿ?

ಶ್ರೀ ಹೆಚ್.ಡಿ. ರೇವಣ್ಣ:– ಹಾಸನ ಡಿ.ಸಿ. ಆಫೀಸಿಗೆ ಕಳುಹಿಸಿರುವುದು.

ಅಧ್ಯಕ್ಷರು:– ಏತಕ್ಕಾಗಿ ಇಟ್ಟು ಕೊಂಡಿದ್ದಾರೆ ಎನ್ನುವುದಕ್ಕೆ ಕಾರಣಗಳನ್ನು ಹೇಳಿ. ಇದು ಸಣ್ಣ ವಿಷಯ. ಇದು ಒಂದು ಆಡಳಿತವೇ?

ಶ್ರೀ ವಿನಯ್‌ಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು) (ಮಾನ್ಯ ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಖಾಲಿ ಇರುವ ಹಳೆಯ ವಾಣಿಜ್ಯ ಸಂಕೀರ್ಣದಲ್ಲಿ ಬಾಡಿಗೆದಾರರು ವಾಸ್ತವವಿದ್ದು ಕರಾರು ಪತ್ರದನ್ವಯ ಅವರ ಬಾಡಿಗೆ ಅವಧಿ ಮುಕ್ತಾಯಗೊಂಡಿದ್ದಲ್ಲಿ ಗುತ್ತಿಗೆ ಅವಧಿಯ ಹೊಸ ದರವನ್ನು ಮುಂದುವರೆಸುವ ಮೂಲಕ ವಿಲೇವಾರಿ ಮಾಡಬಹುದು. ಆದರೆ ವಿಲೇವಾರಿ ಮಾಡುವಂತಹ ನೀತಿಯನ್ನು ಮಾನ್ಯ ನ್ಯಾಯಾಲಯವು ರದ್ದುಪಡಿಸಿದೆ. ಆದಾದನಂತರ ಮಾನ್ಯ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಪ್ರಸ್ತುತ ಅವಕಾಶವಿರುವಂತೆ 12 ವರ್ಷಗಳ ಲೀಸ್ ಅವಧಿ ಮುಗಿದ ನಂತರ ಸದರಿ ಲೀಸ್‌ದಾರರನ್ನು ಪರಿಷ್ಕೃತ ದರಕ್ಕೆ ಮುಂದುವರಿಸಲು ನಿಯಮಾನುಸಾರ ಆಗುವುದಿಲ್ಲ. ಆದುದರಿಂದ ಲೀಸ್ ಅವಧಿ ಮುಗಿದ ನಂತರ ಮೇಲೆ ತಿಳಿಸಿರುವ ಕೆಲವು 72 ನಿಗದಿಯನ್ನು 30 ದಿವಸಗಳು ಮುನ್ನ ಸದರಿ ವಾಣಿಜ್ಯ ಮಳಿಗೆಗಳನ್ನು ಹರಾಜು ಮೂಲಕ ವಿಲೇವಾರಿ ಮಾಡುವುದು ಅವಶ್ಯಕತೆಯಿರುತ್ತದೆ. ಮಾರ್ಪಾಡು ಆದೇಶದ ನಂತರ ಹೊಸ ನೀತಿಯ

ಪ್ರಕಾರ ಹೊಳೆನರಸೀಪುರ ಪುರಸಭೆ ವ್ಯಾಪ್ತಿಯಲ್ಲಿನ ಹೊಳೆನರಸೀಪುರ ಪಟ್ಟಣದ ವಾಣಿಜ್ಯ ಮಳಿಗೆಗಳನ್ನು ವಿಲೇವಾರಿ ಮಾಡಲು ಕ್ರಮವಹಿಸಲಾಗುವುದು. ಮುಂದುವರೆದು, ಪ್ರಸ್ತುತ ಇರುವ ವಾಣಿಜ್ಯ ಮಳಿಗೆಗಳನ್ನು ವಿಲೇವಾರಿ ಮಾಡಲು ಕ್ರಮವಹಿಸಲಾಗುವುದು. ಮುಂದುವರೆದು, ಪ್ರಸ್ತುತ ಇರುವ ವಾಣಿಜ್ಯ ಮಳಿಗೆಗಳ ಬಾಡಿಗೆ ದರವನ್ನು ಪರಿಷ್ಕರಿಸುವ ಬಗ್ಗೆ, ನಿರ್ದೇಶಕರು, ಪೌರಾಡಳಿತ, ನಿರ್ದೇಶನಾಲಯ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಬಗ್ಗೆ ಲೋಕೋಪಯೋಗಿ ಇಲಾಖೆಯ ಅಭಿಪ್ರಾಯ ಪಡೆದು ಸೂಕ್ತ ದರವನ್ನು ನಿಗದಿಪಡಿಸಲಾಗುವುದು.

ಅಧ್ಯಕ್ಷರು:– ರೀ ಸ್ವಾಮಿ, ಪುರಸಭೆಯ ಆಯುಕ್ತರಾದಂತಹವರು ಪರಿಷ್ಕರಣೆ ಮಾಡುವುದಕ್ಕಿಂತ ಮುಂಚಿತವಾಗಿ ಅಲ್ಲಿರತಕ್ಕಂತಹ AEE ಕಳುಹಿಸಿ ಅವರಿಂದ valuation ಮಾಡಿಸಬೇಕು. ಏಕೆಂದರೆ they have to valuate. ನಂತರ ಮಾಹಿತಿ ತರಿಸಿಕೊಂಡು ಅದರ ಪ್ರಕಾರ ನಿರ್ಣಯ ಮಾಡಿ ಕಳುಹಿಸಬೇಕಾ ಅಥವಾ ಅಭಿಪ್ರಾಯ ಕೇಳಬೇಕೆ? ಅವರು ನೀಡಿರುವ ಉತ್ತರದ ಪ್ರಕಾರ ಇನ್ನೂ 12 ವರ್ಷಗಳ ಅವಧಿ ಮುಗಿದಿಲ್ಲವೆಂದು ಹೇಳುತ್ತಿದ್ದಾರೆ. ಇದು ಸರಿಯೇ?

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಕೊಟ್ಟು 20 ವರ್ಷಗಳಾಗಿದೆ. ಇನ್ನೊಂದು ಕಡೆ ಮಳಿಗೆಗಳನ್ನು ಕಟ್ಟಿ ನಾಲ್ಕು ವರ್ಷಗಳಾಗಿದೆ. PWD ಯಿಂದ rate fix ಮಾಡಿಲ್ಲ.

(ಗೊಂದಲ)

ಶ್ರೀ ಸಿ.ಎನ್. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲ.

ಶ್ರೀ ಸಿ.ಎನ್. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ಇದು ಇಡೀ ರಾಜ್ಯದ ಸಮಸ್ಯೆ

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಹೈಕೋರ್ಟಿನಲ್ಲಿ ಯಾವುದೋ ಒಂದು stay ಇದ್ದರೆ ಅದು ಹೊಳೆನರಸೀಪುರಕ್ಕೆ apply

ಆಗುತ್ತದೆಯೇ? ಹೊಳೆನರಸೀಪುರದ್ದು ಏನಾದರೂ stay ಇದೆಯೇನ್ರಿ? ಹೊಳೆನರಸೀಪುರದ್ದು ಏನಾದರೂ ಕೋರ್ಟ್‌ನಲ್ಲಿದೆಯೇ?

ಶ್ರೀ ವಿನಯ್‌ಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು):– ಕಳೆದ 20 ವರ್ಷಗಳಲ್ಲಿ ಅದು ತಮ್ಮ ಕ್ಷೇತ್ರ ಸ್ವಾಮಿ. ತಾವು ಮಂತ್ರಿಯಾಗಿ ಕೆಲಸ ಕಾರ್ಯಗಳನ್ನು ಮಾಡಿದ್ದೀರಿ.

ಅಧ್ಯಕ್ಷರು:– ಅಲ್ಲಿ ಬೇರೆ ಏನೋ ವ್ಯವಹಾರವಿದೆ, ನೀವು ಸುಮ್ಮನಿರಿ.

ಶ್ರೀ ಹೆಚ್.ಡಿ. ರೇವಣ್ಣ:– ಸರಿಯಾದ ಬಾಡಿಗೆಯನ್ನು fix ಮಾಡಿ ಎಂದು ಹೇಳುತ್ತಿದ್ದೇನೆ. present ಬಾಡಿಗೆ ಏನಿದೆ ಅದನ್ನು fix ಮಾಡಿ ಎಂದು ಹೇಳುತ್ತಿದ್ದೇನೆ. ನಿಮ್ಮ ಕಾರ್ಯದರ್ಶಿಯವರಿಗೆ ಹೇಳಿ. ಯಾವುದೋ ಕೋರ್ಟ್ ಕೇಸ್ ಇದ್ದರೆ ಅದನ್ನು ಹೊಳೆನರಸೀಪುರಕ್ಕೆ apply ಮಾಡುತ್ತೀರಾ?

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಯಾರೋ ಕಟ್ ಮಾಡಿಸಿರಬಹುದು. ಯಾರೋ ಕಟ್ ಮಾಡಿಸಿ ಕಟ್ಟಿದ್ದಾರೆ. ಅದೇ ಸಮಸ್ಯೆಯಾಗಿರುವುದು. ಕಟ್ ಮಾಡಿಸಿರುವುದನ್ನು ವಾಪಸ್ಸು ತೆಗೆದುಕೊಳ್ಳದೇ ಇದ್ದರೆ ಬಿಡುಗಡೆಯಾಗುವಂತಿಲ್ಲ.

ಅಧ್ಯಕ್ಷರು:– ಪುರಸಭೆಗಳಿಗೆ ಆದಾಯ ಬರುವುದಿಲ್ಲ. ಇದೇನು ಕಮೀಷನ್ ಕಥೆಯೇ? ನೋಡಿ, auction ಮಾಡುವುದಕ್ಕಿಂತ ಮುಂಚೆ revise ಮಾಡಬೇಕು. ನಮ್ಮ PWD ಯವರಿಗೆ ಕಳುಹಿಸಿ ಅವರಿಂದ evaluation ಮಾಡಿಸಿ, ಅದನ್ನು ಆಧಾರವಾಗಿಟ್ಟುಕೊಂಡು ಅಲ್ಲಿ ನಿರ್ಣಯ ಮಾಡಿ ನಮ್ಮ ಡಿ.ಸಿ. ಯವರಿಗೆ ಕಳುಹಿಸಿದರೆ ಮುಂದೆ ಇಲ್ಲಿಗೆ ಕಳುಹಿಸಿಕೊಡುತ್ತಾರೆ. ಇಲ್ಲಿಂದ ಬರುವುದು, ಅಲ್ಲಿಗೆ ಹೋಗುವುದು, ಇದೇ ಕೆಲಸವಾಗಿ ಬಿಟ್ಟಿದೆ. ಈಗ ಅದನ್ನೇ ನಾನು ಮಾತನಾಡಿಕೊಂಡು ಬರುತ್ತಿದ್ದೇನೆ. ಏನು ಅಡ್ಡಲಿತವ್ರೋ, ಏನು ಕಥೆಯೋ! ಮುಗ ಎಲ್ಲವ್ರ ಆಗಿತ್ತು

ತಿಮ್ಮರಾಯಪ್ಪನವರು ಸದನದಲ್ಲಿ ಇದ್ದಾರೆಯೇ? ನಿಮ್ಮ ಗಮನ ಸೆಳೆಯುವ ಸೂಚನೆ ಬಗ್ಗೆ ಕೇಳಿ.